ಇಂದು ದಿನಾಂಕಃ 13-10-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ SNB ವಕೀಲರಿಂದಃ-**

ನಾನು 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ವಾದಿ 5 ಜನರ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದಾರೆ. ವಾದಿ ಮೊದಿನ ಸಾಬರವರ ಮೊಮ್ಮಗ ಎಂದರೆ ಸರಿಯಲ್ಲ. ಮೊದಿನ ಸಾಬರವರಿಗೆ ಸುಲೇಮಾನ ಪಟೇಲ ಎಂಬ ಮಗನಿದ್ದನೆಂದರೆ ಸರಿಯಲ್ಲ. ಮೊಲಾನ ಪಟೇಲ ಯಾರು ಎಂದು ನನಗೆ ಗೊತ್ತಿಲ್ಲ. ಮಸ್ತಾನ ಸಾಬರವರ ತಂದೆಯ ಹೆಸರು ಮೊದಿನ ಸಾಬ ಇರುತ್ತದೆ. ಮೊದಿನ ಸಾಬರವರಿಗೆ 5 ಜನ ಗಂಡು ಮಕ್ಕಳು ಇದ್ದಾರೆ. ಅವರಿಗೆ ಎಷ್ಟು ಜನ ಹೆಣ್ಣುಮಕ್ಕಳು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಗಂಡು ಮಕ್ಕಳ ಹೆಸರು ಅಜೀಜ್ ಸಾಬ, ಹಾಜೀ ಸಾಬ, ಮೊದಿನ ಸಾಬ, ಮೊಲಾನ ಸಾಬ ಇರುತ್ತಾರೆ. ಸಾಕ್ಷಿ ಮುಂದುವರೆದು 3 ಜನ ಗಂಡು ಮಕ್ಕಳು ಮಾತ್ರ ಇದ್ದಾರೆ ಎಂದು ನುಡಿಯುತ್ತಾರೆ. ಮಸ್ತಾನ ಸಾಬರವರ ತಂದೆಯ ಹೆಸರು ಮತ್ತು 1ನೇ ಪ್ರತಿವಾದಿಯ ಅಜ್ಜನ ಹೆಸರು ಮೊದಿನ ಸಾಬ ಇದ್ದ ಕಾರಣ ವಾದಿ ಅದರ ದುರೂಪಯೋಗಪಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ.

ವಾದಿ ವರ್ಗಾವಣೆಯಾಗಿರುವುದು ತಪ್ಪು ಇರುತ್ತದೆ ಎಂದು ದಾಖಲೆ ಬರೆದುಕೊಟ್ಟು ಪುನಃ ಪ್ರತಿವಾದಿಯರ ಹೆಸರಿನಲ್ಲಿ ವರ್ಗಾವಣೆ ಮಾಡಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ದಾಖಲೆ ಬರೆಯುವ 18 ದಿನಗಳ ಮೊದಲು ಖರೀದಿ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆಯಲ್ಲಿ ರೂ. 12,500/- ಗಳಿಗೆ ವ್ಯವಹಾರ ಒಪ್ಪಿಕೊಂಡಿರುತ್ತಾರೆ ಮತ್ತು ಅದೇ ದಿನ ರೂ. 6,500/- ಗಳನ್ನು ಮಸ್ತಾನ ಪಟೇಲರವರು ಹಮೀದ ಪಟೇಲರವರಿಗೆ ಕೊಟ್ಟಿರುತ್ತಾರೆ. ಸದರಿ ಹಣ ನೀಡಿರುವ ಬಗ್ಗೆ ದಾಖಲೆಯನ್ನು ಬರೆದಿರುವುದಿಲ್ಲ. ಸಾಕ್ಷಿ ಮುಂದುವರೆದು 8 ದಿನಗಳ ನಂತರ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ರೂ. 20/- ಛಾಪಾ ಕಾಗದ ಮೇಲೆ ಬರೆದಿರುತ್ತಾರೆ. ಉಳಿದ ರೂ. 6000/- ನೀಡಿದ ನಂತರ ಸಹ ದಾಖಲೆಯನ್ನು ಬರೆದಿರುತ್ತಾರೆ. ಮೇಲೆ ಹೇಳಿರುವ ಛಾಪಾ ಕಾಗದದ ಮೇಲೆ ನನ್ನ ಸಹಿ ಇಲ್ಲ. ಸದರಿ ಛಾಪಾ ಕಾಗದವನ್ನು ಖಾಜಾ ಮೈನುದ್ದಿನರವರು ಬರೆದಿರುತ್ತಾರೆ. ಆ ದಿನ ಛಾಪಾ ಕಾಗದದ ಮೇಲೆ ಖರೀದಿ ಪತ್ರವನ್ನು ಬರೆದಿರುತ್ತಾರೆ.

ಛಾಪಾ ಕಾಗದದ ಮೇಲೆ ರೂ. 6000/- ಮಾತುಕತೆ ಸಮಯಕ್ಕೆ ನೀಡಲಾಗಿರುತ್ತದೆ ಮತ್ತು ರೂ. 6500/- ಯುಗಾದಿ ಹಬ್ಬಕ್ಕೆ ಕೊಡಬೇಕಾಗಿರುತ್ತದೆ ಎಂದು ನಿಪಿ-3ರಲ್ಲಿ ಉಲ್ಲೇಖವಿದ್ದು ನೀವು ಹೇಳಿರುವುದು ಸರಿಯಿರುತ್ತದೆಯೇ ಅಥವಾ ನಿಪಿ-3ರ ದಾಖಲೆ ಸರಿಯಿರುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಹೇಳಿರುವುದು ಸರಿ ಇರುತ್ತದೆ ಎಂದು ನುಡಿಯುತ್ತಾರೆ. ಮಸ್ತಾನ ಪಟೇಲರವರು ಮಸ್ತಾನ ಸಾಬರವರಿಗೆ ಉಳಿದ ಹಣ ತೆಗೆದುಕೊಂಡು ಖರೀದಿ ಪತ್ರ ಬರೆದುಕೊಡಿ ಎಂದು ದಾವೆ ಸಲ್ಲಿರುತ್ತಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ

ದಾವೆ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಮಸ್ತಾನ ಸಾಬರವರ ಹೆಂಡತಿ ಮಕ್ಕಳಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಗೂ ಹಾಗೂ ದಾವಾ ಆಸ್ತಿಗೂ ಸಂಬಂಧವಿಲ್ಲದೇ ಇದ್ದರು ಸಹ ನಾನು ವಾದಿಯಿಂದ ಹಣ ಪಡೆದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೂವಿನ ಬಾವಿ ಗ್ರಾಮಸ್ಥರು ದಾವಾ ಆಸ್ತಿ 1ನೇಪ್ರತಿವಾದಿಗೆ ಸೇರಿರುತ್ತಾರೆ ಜಿಲ್ಲಾಧಿಕಾರಿಗಳಿಗೆ ಹಾಗೂ ವಕ್ಫ ಭೋರ್ಡಗೆ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮುಖ್ಯವಿಚಾರಣೆಯ ಶಪಥ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತಿದೆ. ವಾದಿಗೆ ಸಹಾಯ ಮಾಡಲು ಸುಳ್ಳು ಶಪಥ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1ನೇ ಪ್ರತಿವಾದಿ ಕಬ್ಜಯಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಮಸೀದಿ ಮತ್ತು ಉಳಿದ ಮೂರು ದಿಕ್ಕಿಗೆ ರಸ್ತೆ ಇವೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 1ನೇ ಪ್ರತಿವಾದಿಗೆ ಸೇರಿದ ಒಂದು ಮನೆ ಇದೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ ವಾದಿಯಿಂದ ಹಣ ಪಡೆದು ಸುಳ್ಳು ಶಪಥ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಖಾಜಾ ಮೈನುದ್ದಿನ ಈಗಲೂ ಸಹ ಜೀವಂತ ಇದ್ದಾರೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**